ಸಂಪಾದಕೀಯ

# ಭಾರತೀಯರ ಜವಾಬ್ದಾರಿ

## ''ಸ್ವಾತಂತ್ರ್ಯಾಚರಣೆಗೆ ಕೃಷ್ಣಪ್ರಜ್ಞೆಯ ಪ್ರಣಾಳಿಕೆ!''

ಆಗಸ್ಟ್ 15-ಭಾರತೀಯರಿಗೆ ಬಹು ಮುಖ್ಯ ದಿನ. ಅರವತ್ತೊಂದು ಸಂವತ್ಸರಗಳ ಹಿಂದೆ, ನಮಗೆ ಬ್ರಿಟಿಷರಿಂದ, ಮುಕ್ತಿ, ಎಲ್ಲೆಡೆ 'ನಾವು ಸ್ವತಂತ್ರರು' ಎನ್ನುವ ಹರ್ಷ. ಸರಿ ಸುಮಾರು ಒಂಬತ್ತು ದಶಕಗಳ ದಬ್ಬಾಳಿಕೆಯಿಂದ ಮುಕ್ತಿ ಎಂದು ಹಿರಿ ಹಿರಿ ಹಿಗ್ಗಿದ್ದರು ಅಂದಿನ ಪ್ರಜೆಗಳು. ನಮ್ಮನ್ನು ಆಳುವವರು ನಾವೇ, ನಮ್ಮ ಪ್ರಗತಿಗೆ ನಾವೇ ದಿಕ್ಕು ತೋರಿಸುವೆವು, ಎಂದು ಎಷ್ಟೋ ಕನಸುಗಳನ್ನು ಹೊತ್ತಿದ್ದರು ಅಂದಿನ ನಮ್ಮ ನಾಯಕರು. ಆರು ದಶಕಗಳು ಕಳೆದಿವೆ ಮತ್ತು ಇಂದಿನ ನಮ್ಮ ರಾಷ್ಟ್ರದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಎಷ್ಟು ಕನಸುಗಳು ನನಸಾಗಿವೆ ಎನ್ನುವ ಬಗ್ಗೆ ಆತ್ಮಾವಲೋಕನ ಅತ್ಯಗತ್ಯ.

ಒಂದೆಡೆ, ಆರ್ಥಿಕವಾಗಿ ಬಹಳಷ್ಟು ಪ್ರಗತಿ ಸಾಧಿಸಿದ್ದೇವೆ. ವೈಜ್ಞಾನಿಕ, ಕೈಗಾರಿಕೆ ಮತ್ತು ಇನ್ನೂ ಅನೇಕ ವಿಭಾಗಗಳಲ್ಲಿ ಮುಂದೆ ಮುಂದೆ ನಾವು ಸಾಗುತ್ತಿದ್ದೇವೆ. ಪ್ರಗತಿಯ ಆಶಾಕಿರಣ ಕೆಲವು ವಿಧಾನಗಳಲ್ಲಿ ಉದಯಿಸಿದ್ದರೂ ನಮ್ಮ ದೇಶದ ಪ್ರಜೆಗಳ ನಾಯಕರ ಮುಂದೆ ಹತ್ತು ಹಲವಾರು ಸವಾಲುಗಳು ಇವೆ. ಭ್ರಷ್ಟಾಚಾರ, ಬಡತನ, ಹಸಿವು ನಿಷ್ಣಾತ ಬುದ್ಧಿವಂತ ತಂತ್ರಜ್ಞಾನಿಗಳು, ವೈದ್ಯರು, ಪ್ರಗತಿಪರ ರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವುದರಿಂದ ಉಂಟಾಗುವ ಪ್ರತಿಭಾ ಪಲಾಯನ, ಇತ್ತೀಚಿನ ಹಣದುಬ್ಬರ, ಅನೇಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಪರಕೀಯರ ದಬ್ಬಾಳಿಕೆಯಿಂದ ಮುಕ್ತಿಯೇನೋ ದೊರಕಿತು. ಆದರೆ ಸ್ವತಂತ್ರದಂದು ಕಂಡ ಕನಸುಗಳು ನನಸಾಗುವ ಹಾದಿಯಲ್ಲಿ ನಾವು ಇನ್ನೂ ಬಹುದೂರ ಸಾಗಬೇಕಿದೆ.

ಭಾರತ, ಮಹಾನ್ ಆಚಾರ್ಯರ ನೆಲೆವೀಡು. ಶಂಕರ, ರಾಮಾನುಜ, ಮಧ್ವ, ಶ್ರೀಚೈತನ್ಯ, ಸಂತ ತುಕರಾಂರಂತಹ ಅನೇಕ ಮಹಾನ್ ಭಕ್ತರು ಅವತರಿಸಿದ ಪುಣ್ಯ ಕ್ಷೇತ್ರವಿದು. ಅಷ್ಟೇಕೆ ಪರಮ ದೇವೋತ್ತಮ ಪುರುಷ ಶ್ರೀಕೃಷ್ಣನೇ ಅವತರಿಸಿದ ಪುಣ್ಯಭೂಮಿಯಿದು. ಭಾರತದ ಪುಣ್ಯಭೂಮಿಯ ಕಣಕಣಗಳು ಭಕ್ತಿ ಮತ್ತು ಧರ್ಮದ ಕಂಪನ್ನು ಸೂಸುತ್ತವೆ. ಇಲ್ಲಿನ ಪ್ರಜೆಗಳು ತಮ್ಮ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಹೆಮ್ಮೆ ಪಡುವವರೇ ಆಗಿದ್ದಾರೆ. ಆಧ್ಯಾತ್ಮಿಕ ಪರಂಪರೆಯೇ ಭಾರತೀಯರ ನಿಜ ಸ್ವತ್ತು, ಸಂಪತ್ತು. ದುರದೃಷ್ಟಕರ ಸಂಗತಿಯೆಂದರೆ, ನಮ್ಮ ಸಂಪತ್ತನ್ನು ತೊರೆದು ಇಂದಿನ ನಾಯಕರು ಮತ್ತು ಪ್ರಜೆಗಳು ಪಾಶ್ಚಾತ್ಯ ದೇಶಗಳ ಲೌಕಿಕ ಪ್ರಗತಿಯ ಜಾಡನ್ನೇ ಅನುಸರಿಸುತ್ತಿದ್ದಾರೆ. ಪ್ರಗತಿಪರ ರಾಷ್ಟ್ರಗಳಿಗೆ ವಲಸೆ ಹೋಗಿ ಅಲ್ಲಿನ ಉನ್ನತ ಹುದ್ದೆಯನ್ನು ಅಲಂಕರಿಸುವುದೇ ಇಂದಿನ ಬಹುತೇಕ ವಿದ್ಯಾವಂತ ಯುವಕರ ಜೀವನದ ಧ್ಯೇಯವಾಗಿದೆ. ಇದೆಂತಾ ಸ್ವಾತಂತ್ರ್ಯ!

ಪಾಶ್ಚಾತ್ಯರ ಮುಂದೆ ಲೌಕಿಕ ಪ್ರಗತಿಗಾಗಿ ಕೈಚಾಚುವ ಬದಲು, ನಮ್ಮ ಆಧ್ಯಾತ್ಮಿಕ ಪರಂಪರೆಯನ್ನು ಎಲ್ಲೆಡೆ ಹರಡಿ, ಧರ್ಮದಿಂದ ಬಹುದೂರ ಸಾಗಿರುವ ಮಾನವ ನಾಗರಿಕತೆಗೆ ಜ್ಞಾನೋದಯವನ್ನು ಉಂಟುಮಾಡಿದರೆ ನಮ್ಮ ದೇಶದ ಘನತೆ ಗೌರವಗಳು ಹೆಚ್ಚುತ್ತವೆ ಮತ್ತು ಇಡೀ ವಿಶ್ವಕ್ಕೆ ಒಳಿತಾಗುತ್ತದೆ ಎಂಬುದನ್ನು ಇಂದಿನ ಯುವಕರು ಮರೆತಿದ್ದಾರೆ.

ಶ್ರೀಲ ಪ್ರಭುಪಾದರು ಪಾಶ್ಚಾತ್ಯ ದೇಶದ ಮಾಧ್ಯಮಗಳು ಅವರನ್ನು ಪ್ರಶ್ನಿಸಿದಾಗ ಅದನ್ನೇ ಹೇಳಿದರು. ''ನಾನು ನಿಮ್ಮ ದೇಶಗಳಿಗೆ ಏನನ್ನೋ ಪಡೆಯಲು ಭಿಕ್ಷೆಗಾಗಿ ಬಂದಿಲ್ಲ, ಬದಲಾಗಿ ನೀವು ಮರೆತಿರುವ, ನಿಮಗೆ ಅತ್ಯಾವಶ್ಯಕವಾದ ಆಧ್ಯಾತ್ಮಿಕ ಜ್ಞಾನವನ್ನು ನೀಡಲು ಬಂದಿದ್ದೇನೆ'' ಎಂದರು. ಶ್ರೀ ಚೈತನ್ಯ ಮಹಾಪ್ರಭುಗಳೂ ಕೂಡ ಅದನ್ನೇ ಹೇಳಿದರು.

**ಭಾರತ ಭೂಮಿತೇ ಮನುಷ್ಯ ಜನ್ಮ ಯಾರ**
**ಜನ್ಮ ಸಾರ್ಥಕ ಕರೀ ಪರ ಉಪಕಾರ**

*(-ಚೈತನ್ಯ ಚರಿತಾಮೃತ :ಆದಿಲೀಲಾ-9.41)*

''ಪುಣ್ಯಭೂಮಿ ಭಾರತದಲ್ಲಿ ಜನಿಸಿರುವ ಪ್ರತಿಯೊಬ್ಬನೂ ತನ್ನ ಜನ್ಮವನ್ನು ಸಂಪೂರ್ಣವಾಗಿ ಸಾರ್ಥಕಗೊಳಿಸಿಕೊಂಡು (ಅಂದರೆ ಕೃಷ್ಣಪ್ರೇಮದ ಅತ್ಯುನ್ನತ ಹಂತವನ್ನು ಪಡೆದು) ಇತರರಿಗೆ ಪರೋಪಕಾರ ಮಾಡಬೇಕು. ಇದು ಅವರ ಮೊದಲ ಕರ್ತವ್ಯ.''

ಶ್ರೀ ಚೈತನ್ಯರು ಎರಡು ವಿಷಯಗಳನ್ನು ಹೇಳಿದ್ದಾರೆ:

**1. ಪರಿಶುದ್ಧ ಕೃಷ್ಣ ಭಕ್ತಿಸೇವೆಯ ಪ್ರಾಪ್ತಿಯಿಂದ ನಮ್ಮ ಜೀವನದ ಸಾರ್ಥಕತೆ.**

**2. ಭಗವನ್ನಾಮ ಪ್ರಚಾರದಿಂದ ಪರರಿಗೆ ಉಪಕಾರ.**

ಇವೆರಡನ್ನು ಕಾಯಾ, ವಾಚಾ, ಮನಸಾ ಪಾಲಿಸಿದರೆ ಮಾತ್ರ ನಾವು ನಿಜವಾದ ಸ್ವಾತಂತ್ರ್ಯವನ್ನು ಪಡೆಯಬಲ್ಲೆವು ಮತ್ತು ಇತರರನ್ನೂ ಮುಕ್ತಗೊಳಿಸಬಲ್ಲೆವು. ನಮ್ಮ ನಾಯಕರು ಮತ್ತು ಪ್ರಜೆಗಳೆಲ್ಲರೂ ಶ್ರೀ ಚೈತನ್ಯರ ಕರೆಯನ್ನು ಗಂಭೀರವಾಗಿ ಪರಿಗಣಿಸುವುದೆಂತು? ಬರಿಯ ತಂತ್ರಜ್ಞಾನ, ಆರ್ಥಿಕ ಸವಲತ್ತುಗಳಿಗಾಗಿ ಇತರ ಪ್ರಗತಿಪರ ದೇಶಗಳಿಂದ ಭಿಕ್ಷೆ ಬೇಡುವುದನ್ನು ನಿಲ್ಲಿಸಿ, ನಮ್ಮ ನಿಜ ಸಂಪತ್ತನ್ನು ''ರಫ್ತು'' ಮಾಡಲು ಉದ್ಯುಕ್ತರಾಗುವುದೆಂತು? ''ಭಗವತ್ ಜ್ಞಾನದ ಪ್ರಸರಣದಿಂದ ಪರೋಪಕಾರವಾಗುವುದೇ ಹೊರತು, ಇತರರ ಶೋಷಣೆಯಾಗದು.''

ಶ್ರೀಲ ಪ್ರಭುಪಾದರು ನಮಗೆ ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ಭಾರತೀಯ ಪರಂಪರೆಯ ನೈಜ ರಾಯಭಾರಿಗಳಾಗೋಣ ಬನ್ನಿ. ಬನ್ನಿ, ಆಧ್ಯಾತ್ಮಿಕ ಪ್ರಸರಣದಿಂದ ಸದೃಢ, ಸುಮನೋಹರ, ಉಜ್ವಲ ಭವಿಷ್ಯವನ್ನು ನಮ್ಮ ರಾಷ್ಟ್ರಕ್ಕೆ ನೀಡೋಣ. ಬೇರೊಂದು ಪ್ರಣಾಳಿಕೆಯನ್ನೇ ಬರೆಯೋಣ!

ಹರೇಕೃಷ್ಣ